<u>ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ, ತರೀಕೆರೆ</u>

ಸಿ.ಸಿ.ಸಂಖ್ಯೆ.1733/2022

ಉಪಸ್ಥಿತರುಃ

ಶ್ರೀ ಸಂತೋಷ ಕುಮಾರ ಪಿ. ಎಸ್., ಎಂ.ಕಾಂ., ಎಲ್?ಎಲ್?ಎಂ.

ಪಿರ್ಯಾದುದಾರರುಃ ಅಜ್ಜಂಪುರ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದಃ ಶ್ರೀ ರಮೇಶ.ಕೆ,
ಬಿನ್ ಶ್ರೀ ರೇವಣ್ಣಸಿದ್ದಪ್ಪ.ಎಲ್,
ವಯಸು 45 ವರ್ಷಗಳು,
ರಾಜಸ್ವ ನಿರೀಕ್ಷಕರು,
ಯಗಟಿ ಹೋಬಳಿ,
ವಾಸಃ ಸಿ.ದಾಸರಹಳ್ಳಿ ಗ್ರಾಮ,
ಅಂತರಘಟ್ಟೆ ಹೋಬಳಿ,
ಅಜ್ಜಂಪುರ ತಾಲ್ಲೂಕು.

:: ಆರೋಪಣೆ ::

ಸಂತೋಷ ಕುಮಾರ ಪಿ. ಎಸ್., ಎಂ.ಕಾಂ., ಎಲ್?ಎಲ್?ಎಂ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ತರೀಕೆರೆ ಆದ ನಾನು, ಈ ಮೂಲಕ ಆರೋಪಿಯಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ-

ದಿನಾಂಕ 23.09.2021 ರಂದು ಮಧ್ಯಾಹ್ನ 2.30 ಗಂಟೆ ಸಮಯಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಕಾಟಿಗನೆರೆ ಗ್ರಾಮದ ಶ್ರೀ ಎಮ್.ಎಸ್.ಶಿವಮೂರ್ತಿ ಮತ್ತು ಶ್ರೀ ರಾಜಯ್ಯ ಎಂಬುವವರ ಜಮೀನಿನ ಮಧ್ಯೆ ಹಾದು ಹೋಗಿರುವ ರಾಜ್ಯ ಹೆದ್ದಾರಿ 24 ರಲ್ಲಿ ಆರೋಪಿಯಾದ ನೀವು ಕೆಎ.66.ಎಂ.2388 ರ ಕಾರನ್ನು ಮಧ್ಯಸೇವನೆ ಮಾಡಿದ ಅಮಲಿನಲ್ಲಿ ಅಜ್ಜಂಪುರ ಕಡೆಯಿಂದ ಹೊಸದುರ್ಗದ ಕಡೆಗೆ ಕಾರನ್ನು ಅಡ್ಡಾದಿಡ್ಡಿಯಾಗಿ ಅತೀವೇಗ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡುತ್ತಾ ರಸ್ತೆಯ ಬಲ ಬದಿಗೆ ಹೋಗಿದ್ದು, ಆಗ ಎದುರುಗಡೆಯಿಂದ ಹೊಸದುರ್ಗ ಕಡೆಯಿಂದ ರಸ್ತೆಯ ಎಡಬದಿಯಲ್ಲಿ ಕೆಎ.18/ಎಕ್ಸ್-2626 ರ ನಂಬರಿನ ಮೋಟಾರು ಸೈಕಲನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದ ಚಾಸಾ-1 ಹೆಚ್.ಆರ್.ಸಂಜುರವರ ಚಿಕ್ಕಪ್ಪ ರಾಜಪ್ಪರವರ ಮೋಟಾರು ಸೈಕಲ್ಲಿಗೆ ಡಿಕ್ಕಿ ಹೊಡೆಸಿ, ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.66.ಎಂ.2388 ರ ಕಾರನ್ನು ಅತೀವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ರಾಜಪ್ಪರವರ ಕೆಎ.18.ಎಕ್ಸ್.2626 ರ ಮೋಟಾರು ಸೈಕಲ್ಲಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಬೈಕಿನ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಸಾಕ್ಷಿ-11 ಶ್ರೀ ಕುಮಾರ ರವರ ಬಲತೊಡೆಗೆ ಹಾಗೂ ಮೈಕೈಗೆ ತೀವ್ರ ಸ್ವರೂಪದ ಗಾಯಗಳಾಗಿ, ಭಾರತ ದಂಡ ಸಂಹಿತೆ ಕಲಂ 338 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.66.ಎಂ.2388 ರ ಕಾರನ್ನು ಅತೀವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ರಾಜಪ್ಪರವರ ಕೆಎ.18.ಎಕ್ಸ್.2626 ರ ಮೋಟಾರು ಸೈಕಲ್ಲಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಸದರಿ ರಾಜಪ್ಪರವರ ಬಲಕಾಲಿನ ತೊಡೆಗೆ, ಮೈಕೈಗೆ, ಮೂಗು ಮತ್ತು ಬಾಯಿಗೆ ತೀವ್ರ ಸ್ವರೂಪದ ಪೆಟ್ಟು ಬಿದ್ದಿದ್ದು ಅದೇದಿನ ಸಂಜೆ 4.15 ರ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ ಇಲ್ಲಿ ಮೃತಪಟ್ಟಿದ್ದು, ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.66.ಎಂ.2388 ರ ಕಾರನ್ನು ಚಾಲನೆ ಮಾಡಲು ಚಾಲನ ಪರವಾನಿಗೆ ಇಲ್ಲದೆ ಇದ್ದರು ಸಹ ಚಾಲನೆ ಮಾಡಿ, ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 181 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.66.ಎಂ.2388 ರ ಕಾರನ್ನು ಮದ್ಯಪಾನ ಮಾಡಿ ಚಾಲನೆ ಮಾಡಿ, ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 185 ರ ಅಡಿ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ05.01.2022 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಸಹಿ/-
ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ
ಜೆಎಂಎಫ್?ಸಿ , ತರೀಕೆರೆ